ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರದ ಆರಾಧನಾ ಸಮಿತಿಯು ಸರ್ಕಾರದ ಆದೇಶ ಸಂಖ್ಯೆ: ಕಂಇ 12 ಮುಸರ 2008, ದಿ:31.12.2008ರನ್ವಯ ರಚಿಸಲಾಗಿದೆ ಹಾಗೂ ಬೆಳ್ತಂಗಡಿ ಆಶ್ರಯ ಸಮಿತಿಯನ್ನು ವಸತಿ ಇಲಾಖೆಯ ಆದೇಶ ಸಂಖ್ಯೆ: ವಇ 31 ಹೆಚ್ಎಎಸ್ 08, ದಿ:12.12.2008ರನ್ವಯ ರಚಿಸಲಾಗಿದೆ ಎಂದು ವಸತಿ ಇಲಾಖೆಯ ಪತ್ರ ಸಂಖ್ಯೆ: ವಇ 51 ಹೆಚ್ಎಎಂ 2009, ದಿ:07.07.2009ರಲ್ಲಿ ತಿಳಿಸಿದೆ.

ಆ) ಸಮಿತಿಗಳನ್ನು ರಚನೆ ಮಾಡಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ?

ಮೇಲೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಸಂಖ್ಯೆ: ಆರ್ಡಿ 64 ಎಲ್ಜಿಎ 2009**

**(ಜಿ.ಕರುಣಾಕರ ರೆಡ್ಡಿ)**
**ಕಂದಾಯ ಸಚಿವರು.**

**ಕರ್ನಾಟಕ ವಿಧಾನ ಸಭೆ**

**172 ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ)**
**ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು**

ಅ) ಇಂಡಿ ಮತಕ್ಷೇತ್ರದಲ್ಲಿ ಯಾವ ಯಾವ ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಬಹುದಾಗಿದೆ.

ಸಕ್ಕರೆ ಕಾರ್ಖಾನೆ, ವೈನ್, ಜವಳಿ ಮತ್ತು ಸಿದ್ಧ ಉಡುಪು ತಯಾರಿಕಾ ಘಟಕಗಳನ್ನು ಸ್ಥಾಪಿಸಬಹುದಾಗಿದೆ. ಈಗಾಗಲೇ ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ ಸಭೆಯು ಎರಡು ಹೊಸ ಸಕ್ಕರೆ ಕಾರ್ಖಾನೆ ಹಾಗೂ ಒಂದು ವಿದ್ಯುತ್ ಉತ್ಪಾದನಾ ಘಟಕಕ್ಕೆ ಸ್ಥಾಪಿಸಲು ಅನುಮೋದನೆ ನೀಡಿರುತ್ತದೆ.

ಆ) ಈ ಕಾಮಗಾರಿಗಳಿಗಾಗಿ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವ ಯೋಜನೆ ಸರಕಾರದ ಮುಂದಿದೆಯೇ,

ಮೇಲ್ಕಂಡ ಎರಡು ಸಕ್ಕರೆ ಕಾರ್ಖಾನೆಗಳಿಗೆ ಒಟ್ಟು 192 ಎಕರೆ ಭೂಪ್ರದೇಶ ಅವಶ್ಯಕವಿದ್ದು, 94 ಎಕರೆ ಜಾಗವನ್ನು ಮೆ: ಜಮಖಂಡಿ ಶುಗರ್ಸ್ ಲಿಮಿಟೆಡ್ ರವರು ಕೆಐಎಡಿಬಿ ಮುಖೇನ ಹಾಗೂ 98 ಎಕರೆ ಜಾಗವನ್ನು ಮೆ: ಇಂಡಿಯನ್ ಶುಗರ್ ಕಂಪನಿ ಲಿಮಿಟೆಡ್ ರವರು ನೇರವಾಗಿ ರೈತರಿಂದ ಖರೀದಿಸ ಬೇಕಾಗಿದೆ.

ಇ) ಹಾಗಿದ್ದಲ್ಲಿ, ಎಷ್ಟು ಭೂಮಿಯನ್ನು ಯಾವ ಸ್ಥಳದಲ್ಲಿ ಸ್ವಾಧೀನಪಡಿಸಿ ಕೊಳ್ಳ ಬೇಕೆಂಬುದರ ಬಗ್ಗೆ ಸಿದ್ಧಪಡಿಸಿದ ಯೋಜನೆ ಸರ್ಕಾರದ ಮುಂದಿದೆ,

(ಅ)ಮೆ: ಜಮಖಂಡಿ ಶುಗರ್ಸ್ ಲಿಮಿಟೆಡ್, ನಾದ-ಕೆ.ಡಿ ಗ್ರಾಮ, ಇಂಡಿ ತಾಲ್ಲೂಕು ಈ ಗ್ರಾಮದಲ್ಲಿ 84 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಭೂಸ್ವಾಧಿನ ವೆಚ್ಚವನ್ನು ಕೆಐಎಡಿಬಿಗೆ ಪಾವತಿಸಬೇಕಾಗಿದೆ.

(ಆ)ಇಂಡಿ ತಾಲ್ಲೂಕಿನ ಶಿರನಾಳ ಗ್ರಾಮದಲ್ಲಿ ಒಟ್ಟು 62 ಎಕರೆ 27 ಗುಂಟೆ ಭೂಮಿಯನ್ನು ಜವಳಿ ಪಾರ್ಕ್‌ಗಾಗಿ ಗುರುತಿಸಲಾಗಿದ್ದು, ಕೈಗಾರಿಕಾ ವಿಕಾಸ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ). ಇಂಡಿ ಮತ ಕ್ಷೇತ್ರದಲ್ಲಿ ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಎಷ್ಟು ಜನ ತರುಣ ಉದ್ಯಮಿಗಳು ಮುಂದೆ ಬಂದಿದ್ದಾರೆ; ಈ ಉದ್ಯಮಿಗಳಿಗೆ ಯಾವ ಯಾವ ಸೌಲಭ್ಯವನ್ನು ನೀಡಲಾಗಿದೆ.

ಕಳೆದ 5 ವರ್ಷಗಳಲ್ಲಿ ಅಂದರೆ 2005–06 ರಿಂದ ಇಲ್ಲಿಯವರೆಗೆ ಇಂಡಿ ತಾಲ್ಲೂಕಿನಲ್ಲಿ ರಾಜ್ಯ ಏಕಗವಾಕ್ಷಿ ಸಮಿತಿ ಸಭೆಯು 3 ಯೋಜನೆ ಗಳನ್ನು ಅನುಮೋದಿಸಿದೆ. ಈ ಯೋಜನೆಗಳಿಂದ ರೂ.145.97 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, 630 ಜನರಿಗೆ ಉದ್ಯೋಗ ಅವಕಾಶ ಲಭ್ಯವಾಗಲಿದೆ. ವಿವರಗಳನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಯೋಜನೆಗಳಿಗೆ ರಾಜ್ಯದ 2009–14ರ ಕೈಗಾರಿಕಾ ನೀತಿಯಂತೆ ಉತ್ತೇಜನ ಹಾಗೂ ರಿಯಾಯಿತಿಗಳಿಗೆ ಅರ್ಹವಾಗಿರುತ್ತವೆ.

**ಸಿಐ 139 ಎಸ್‌ಪಿಐ 2009**

[ಮುರುಗೇಶ ಆರ್ ನಿರಾಣಿ]
ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು.

ಡಾ॥ ಬಗಲಿ ಸಾರ್ವಭೌಮ ಸತಗೌಡ. (ಇಂಡಿ) ರವರ ಪ್ರಶ್ನೆ ಸಂಖ್ಯೆ: 172

ಅನುಬಂಧ

**ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ಕೈಗಾರಿಕೆಗಳಿಗೆ ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ಸಮಿತಿ ಸಭೆಯಲ್ಲಿ 2004–05ನೇ ಸಾಲಿನಿಂದ ಈವರೆಗೂ ಅನುಮೋದನೆ ನೀಡಿರುವ ವಿವರಗಳು**

| ಕ್ರ. ಸಂ. | ಕಂಪನಿಯ ಹೆಸರು | ವಿಳಾಸ | ಸ್ಥಳ | ವಸ್ತುಗಳು | ಸಭೆಯ ದಿನಾಂಕ | ಬಂಡವಾಳ ಹೂಡಿಕೆ ಮೊತ್ತ | ಭೂಮಿ (ಎಕರೆ ಗಳಲ್ಲಿ) | ಲ್ಯಾಂಡ್ ಏಜೆನ್ಸಿ | ಉದ್ಯೋಗ ಸಂಖ್ಯೆ | ಷರಾ |
|---|---|---|---|---|---|---|---|---|---|---|
| 1. | ಜಮಖಂಡಿ ಶುಗರ್ಸ್ ಲಿ., | ಹಿರೆಪದಸಾಲಗಿ ಪೋಸ್ಟ್, ನನಗೂರು, ಜಮಖಂಡಿ ತಾ: ಬಾಗಲಕೋಟೆ ಜಿಲ್ಲೆ –587301 | ನಾಡಾ.ಕೆ.ಡಿ ವಿಲೇಜ್ ಇಂಡಿ ತಾ: ಬಿಜಾಪುರ ಜಿಲ್ಲೆ | ವೈಟ್ ಕ್ರಿಸ್ಟಲ್ ಶುಗರ್ 2500 ಟಿಸಿಡಿ ಸಾಮರ್ಥ್ಯ | 29–7–06 | 48.89 ಕೋಟಿಗಳು | 94 | ಕೆ.ಐ.ಎ.ಡಿ.ಬಿ | 300 | ಅನುಷ್ಠಾನ ಹಂತದಲ್ಲಿದೆ |
| 2. | ಇಂಡಿಯನ್ ಶುಗರ್ಸ್ ಮ್ಯಾನುಫಾಕ್ಚರಿಂಗ್ ಕಂ ಲಿಮಿಟೆಡ್ | ನಂ.4028/15ಎ ಲಕ್ಷ್ಮೀ ರಸ್ತೆ, ಪಂಡವಾರಾಪುರ ಮಹಾರಾಷ್ಟ್ರ | ಹವಿನಾಳ ವಿಲೇಜ್, ಇಂಡಿ ತಾ: ಬಿಜಾಪುರ ಜಿಲ್ಲೆ | ವೈಟ್ ಕ್ರಿಸ್ಟಲ್ ಶುಗರ್2500 ಟಿಡಿಸಿ ಜೊತೆಗೆ 12 ಎಂ. ಡಬ್ಲ್ಯೂ ಕೋ ಜನರೇಷನ್ ಪ್ಲಾಂಟ್ | 28–5–07 | 49.33 ಕೋಟಿಗಳು | 98 | 109 ಸೆಕ್ಷನ್ ಅಡಿಯಲ್ಲಿ | 280 | ಅನುಷ್ಠಾನ ಹಂತದಲ್ಲಿದೆ |
| 3. | ಇಂಡಿಯನ್ ಶುಗರ್ಸ್ ಮ್ಯಾನುಫಾಕ್ಚರಿಂಗ್ ಕಂ ಲಿಮಿಟೆಡ್ | ಕೇರಾಫ್ ವಿಠಲ್ ಆಟೋ ಲೈನ್, ಬಸ್‌ಸ್ಯಾ ಂಡ್ ಎದುರು ತೆಂಬುರ್ನಿ, ಎನ್ ಹೆಚ್–9, ಮುದ್ದೇಬಿಹಾಳ್ ತಾ: ಬಿಜಾಪುರ ಜಿಲ್ಲೆ | ಹವಿನಾಳ ವಿಲೇಜ್, ಇಂಡಿ ತಾ: ಬಿಜಾಪುರ ಜಿಲ್ಲೆ | 60 ಕೆ.ಎಲ್.ಪಿ.ಡಿ ಖಿಸ್ಟಿಲರಿ ವಿತ್ 10.50 ಎಂ. ಡಬ್ಲ್ಯೂ –ಕೋ–ಜನರೇಷನ್ ಪವರ್ ಪ್ಲಾಂಟ್ | 28–2–09 | 47.75 ಕೋಟಿಗಳು | 54 | ಅಸ್ತಿತ್ವದಲ್ಲಿರುವ ಭೂಮಿ | 50 | ಅನುಷ್ಠಾನ ಹಂತದಲ್ಲಿದೆ. |
| | | | | | ಒಟ್ಟು: | 145.97 | 246 | | 63 | |